# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 579 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | ತಡೆಹಿಡಿಯಲಾದ ಪ್ರಶ್ನೆ (20.02.2024) |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು ಮತ್ತು ನಗರ ಯೋಜನೆ ಸಚಿವರು. |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಆಸ್ತಿ ಮಾಲೀಕರ ಸಂಖ್ಯೆ ಎಷ್ಟು?; ಒಟ್ಟು ಎಷ್ಟು ಮೊತ್ತದ ಆಸ್ತಿ ತೆರಿಗೆ ಸಂಗ್ರಹಿಸಲು ಬಾಕಿ ಇದೆ;</td><td>ಕಲಬುರಗಿ ಮಹಾನಗರ ಪಾಲಿಕೆ ಮತ್ತು ಯಾದಗಿರಿ ಜಿಲ್ಲೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಒಟ್ಟು ಮಾಲೀಕರ ಸಂಖ್ಯೆ ಹಾಗೂ ಆಸ್ತಿ ತೆರಿಗೆ ಸಂಗ್ರಹಿಸಲು ಬಾಕಿ ಇರುವ ಮಾಹಿತಿಯ ವಿವರ ಈ ಕೆಳಕಂಡಂತಿರುತ್ತದೆ:-
<table>
<tr><th>ನಗರ ಸ್ಥಳೀಯ ಸಂಸ್ಥೆಯ ಹೆಸರು</th><th>ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಒಟ್ಟು ಮಾಲೀಕರ ಸಂಖ್ಯೆ</th><th>ಒಟ್ಟು ಆಸ್ತಿ ತೆರಿಗೆ ಸಂಗ್ರಹಿಸಲು ಬಾಕಿ ಇರುವ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>ಕಲಬುರಗಿ (ಮ.ನ.ಪಾ)</td><td>26452</td><td>4183.00</td></tr>
<tr><td>ಶಹಾಬಾದ</td><td>610</td><td>4.16</td></tr>
<tr><td>ಯಾದಗಿರಿ</td><td>492</td><td>400.09</td></tr>
<tr><td>ಶಹಾಪುರ</td><td>9610</td><td>672.66</td></tr>
<tr><td>ಸುರಪೂರ</td><td>5638</td><td>266.51</td></tr>
</table></td></tr>
<tr><td>ಆ</td><td>ಕಳೆದ ಮೂರು ವರ್ಷಗಳಿಂದ ಸಂಗ್ರಹಿಸಲು ಬಾಕಿ ಇರುವ ಆಸ್ತಿ ತೆರಿಗೆಯ ಒಟ್ಟು ಮೊತ್ತ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)</td><td>ಕಳೆದ ಮೂರು ವರ್ಷಗಳಿಂದ ಸಂಗ್ರಹಿಸಲು ಬಾಕಿ ಇರುವ ಆಸ್ತಿ ತೆರಿಗೆಯ ವರ್ಷವಾರು ವಿವರ ಈ ಕೆಳಕಂಡಂತಿದೆ.
<table>
<tr><th colspan="4">(ರೂ.ಲಕ್ಷಗಳಲ್ಲಿ)</th></tr>
<tr><th>ನಗರ ಸ್ಥಳೀಯ ಸಂಸ್ಥೆಯ ಹೆಸರು</th><th>2021-22</th><th>2022-23</th><th>2023-24</th></tr>
<tr><td>ಕಲಬುರಗಿ (ಮ.ನ.ಪಾ)</td><td>1150.01</td><td>1496.08</td><td>1081.56</td></tr>
<tr><td>ಶಹಾಬಾದ</td><td>1.18</td><td>1.72</td><td>1.16</td></tr>
<tr><td>ಯಾದಗಿರಿ</td><td>97.09</td><td>90.00</td><td>213.00</td></tr>
<tr><td>ಶಹಾಪುರ</td><td>222.74</td><td>323.79</td><td>126.13</td></tr>
<tr><td>ಸುರಪೂರ</td><td>45.87</td><td>43.71</td><td>176.51</td></tr>
</table></td></tr>
<tr><td>ಇ</td><td>ಆಸ್ತಿ ತೆರಿಗೆ ಸಂಗ್ರಹಿಸಲು ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;</td><td>• ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಪ್ರತಿವಾರ ಕಂದಾಯ ಶಾಖೆಯ ಸಭೆ ಜರುಗಿಸಿ ಅತೀ ಕಡಿಮೆ ತೆರಿಗೆ ಸಂಗ್ರಹಣೆ ಮಾಡುತ್ತಿರುವ ಹಾಗೂ ನಿರ್ಲಕ್ಷ್ಯತನ ತೋರಿದ ಅಧಿಕಾರಿಗಳಿಗೆ/ ಸಿಬ್ಬಂದಿಗಳಿಗೆ ಉಪ ಆಯುಕ್ತರು (ಕಂದಾಯ) ಕಲಬುರಗಿ ಮಹಾನಗರ ಪಾಲಿಕೆ ಇವರ ನೋಟೀಸ್ ಜಾರಿ ಮಾಡಲಾಗಿರುತ್ತದೆ.</td></tr>
</table>

<table>
<tr><td></td><td></td><td>• ಪೌರಾಡಳಿತ ನಿರ್ದೇಶನಾಲಯದಿಂದ ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆ ಸಂಗ್ರಹದಲ್ಲಿ ಕಡಿಮೆ ಪ್ರಗತಿ ಸಾಧಿಸಿರುವುದರಿಂದ ಪ್ರತಿ ಮಾಹೆಯಾನ ಗುರಿ ನಿಗದಿಪಡಿಸಿ, ಸಭೆಗಳ ಮೂಲಕ ಪ್ರಗತಿ ಸಾಧಿಸುವಂತೆ ತಿಳಿಸಲಾಗಿರುತ್ತದೆ ಹಾಗೂ ಆಸ್ತಿ ತೆರಿಗೆ ಸಂಗ್ರಹದಲ್ಲಿ ಕಡಿಮೆ ಪ್ರಗತಿ ಸಾಧಿಸಿದ ಉಪ ಆಯುಕ್ತರು (ಕಂದಾಯ) ಕಲಬುರಗಿ (ಮ.ನ.ಪಾ) ರವರಿಗೆ ಪೌರಾಡಳಿತ ನಿರ್ದೇಶನಾಲಯದಿಂದ ಕಾರಣ ಕೇಳಿ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ.<br><br>• ಸಂಬಂಧ ಪಟ್ಟ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ ಮುಖ್ಯಾಧಿಕಾರಿಗಳು ಯಾದಗಿರಿ, ಶಹಾಪುರ ಹಾಗೂ ಸುರಪೂರ ನಗರಸಭೆಯಿಂದ ಅತೀ ಕಡಿಮೆ ತೆರಿಗೆ ಸಂಗ್ರಹಣೆ ಮಾಡುತ್ತಿರುವ ಹಾಗೂ ನಿರ್ಲಕ್ಷ್ಯತನ ತೋರಿದ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ನೋಟೀಸ್ ಜಾರಿ ಮಾಡಿರುತ್ತಾರೆ.</td></tr>
<tr><td>ಈ</td><td>ಕಳೆದ 3 ವರ್ಷಗಳಿಂದ ವಾಣಿಜ್ಯ ಕಟ್ಟಡಗಳಿಂದ ಸಂಗ್ರಹಿಸಲು ಬಾಕಿ ಇರುವ ಆಸ್ತಿ ತೆರಿಗೆ ಮೊತ್ತ ಎಷ್ಟು; ತೆರಿಗೆ ಸಂಗ್ರಹಿಸಲು ಬಾಕಿ ಇರುವ ವಾಣಿಜ್ಯ ಕಟ್ಟಡಗಳು ಹಾಗೂ ಮಾಲ್‌ಗಳ ಹೆಸರಿನೊಂದಿಗೆ ವರ್ಷವಾರು ವಿವರ ನೀಡುವುದು?</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ವಾಣಿಜ್ಯ ಕಟ್ಟಡಗಳಿಂದ ಸಂಗ್ರಹಿಸಲು ಬಾಕಿ ಇರುವ ಆಸ್ತಿ ತೆರಿಗೆ ಮೊತ್ತದ ವರ್ಷವಾರು ವಿವರಗಳು ಈ ಕೆಳಕಂಡಂತಿರುತ್ತದೆ:-
<table>
<tr><td colspan="4" align="right">(ರೂ.ಲಕ್ಷಗಳಲ್ಲಿ)</td></tr>
<tr><th>ನಗರ ಸ್ಥಳೀಯ ಸಂಸ್ಥೆಯ ಹೆಸರು</th><th>2021-22</th><th>2022-23</th><th>2023-24</th></tr>
<tr><td>ಕಲಬುರಗಿ (ಮ.ನ.ಪಾ)</td><td>363.50</td><td>346.05</td><td>335.35</td></tr>
<tr><td>ಶಹಾಬಾದ</td><td colspan="3">ವಾಣಿಜ್ಯ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತೆರಿಗೆ ಬಾಕಿ ಇರುವುದಿಲ್ಲ.</td></tr>
<tr><td>ಯಾದಗಿರಿ</td><td>03.65</td><td>04.44</td><td>02.22</td></tr>
<tr><td>ಶಹಾಪುರ</td><td>23.59</td><td>22.82</td><td>19.37</td></tr>
<tr><td>ಸುರಪೂರ</td><td>05.24</td><td>02.90</td><td>02.54</td></tr>
</table>
ತೆರಿಗೆ ಸಂಗ್ರಹಿಸಲು ಬಾಕಿ ಇರುವ ವಾಣಿಜ್ಯ ಕಟ್ಟಡಗಳು ಹಾಗೂ ಮಾಲ್‌ಗಳ ಹೆಸರುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
</table>

ನಅಇ 13 ಎಸಿಜಿ 2024(ಇ)

**(ಬಿ.ಎಸ್.ಸುರೇಶ್)**
ನಗರಾಭಿವೃದ್ಧಿ ಹಾಗೂ
ನಗರ ಯೋಜನೆ ಸಚಿವರು.